# ಶ್ರೇಷ್ಠತೆಯ ವ್ಯಸನ
## ವಿಕಾಸವೋ? ಸೊಕ್ಕೋ?



ಬರಗೂರು ರಾಮಚಂದ್ರಪ್ಪ
ಕಲೆ: ಕೆ.ವಿ. ತಿರುಮಲೇಶ್

ಅದು 1970ರ ಕಾಲ. ನಾನು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಎಂ.ಎ. ವಿದ್ಯಾರ್ಥಿ. ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶನಗೊಳ್ಳುತ್ತಿದ್ದ ಹೊಸ ಮಾದರಿಯ ನಾಟಕಗಳನ್ನು ನೋಡಲು ಹೋಗುತ್ತಿದ್ದೆ. ಕಲಾಕ್ಷೇತ್ರದ ಮೆಟ್ಟಿಲು ಹತ್ತುವಾಗ ಏನೋ ಒಂದು ರೀತಿಯ ಅಳುಕು; ಹಿಂಜರಿಕೆ. ಅದಕ್ಕೆ ಕಾರಣವಿತ್ತು. ಮೆಟ್ಟಿಲು ಹತ್ತಿ ಅಂಗಳಕ್ಕೆ ಕಾಲಿಟ್ಟ ಕೂಡಲೇ ಕಾಣುತ್ತಿದ್ದ ಕೆಲವು ವ್ಯಕ್ತಿಗಳ ಉಡುಪು, ವರ್ತನೆ, ವಿಭಿನ್ನವಾಗಿತ್ತು. ಜುಬ್ಬ, ಪ್ಯಾಂಟು, ಬಗಲು ಚೀಲ, ಕೆಲವರಿಗೆ ಚಿಕ್ಕ ಗಡ್ಡ, ಕೆಲವರ ಕೈಯಲ್ಲಿ ಸಿಗರೇಟ್, ಗಂಭೀರ ಗಹನಾಭಿನಯದ ಶೈಲಿ ಮುಂತಾದವನ್ನು ಕಂಡಾಗ ನಾನು ಅವರಂತೆ ಅಲ್ಲ ಅಥವಾ ಅವರು ನನ್ನಂತೆ ಅಲ್ಲ ಎನ್ನಿಸಿ ಪರಕೀಯ ಭಾವನೆ ಕಾಣುತ್ತಿತ್ತು. ಆ ಕೆಲವರು ಅಂದಿನ 'ನವ್ಯ ನಾಟಕಗಳ' ಪ್ರತಿನಿಧಿಗಳಾಗಿದ್ದರು. ನಾಟಕವಷ್ಟೇ ಅಲ್ಲ, ಒಟ್ಟಾರೆ ನವ್ಯ ಸಾಹಿತ್ಯದ ಪ್ರಾತಿನಿಧಿಕ ರೂಪಗಳೆಂದರೂ ಸರಿಯಾದೀತು. ಕನ್ನಡ ಸಾಹಿತ್ಯದಲ್ಲಾದ ಆಂತರಿಕ ಬದಲಾವಣೆಯು ಉಡುಪು ಮತ್ತು ವರ್ತನೆಗಳಲ್ಲಿ ಬಹಿರಂಗ ಬದಲಾವಣೆಯಾಗಿ ಕಣ್ಣಿಗೆ ಬಡಿಯುತ್ತಿತ್ತು. ಹೊಸ ಪ್ರಯೋಗಗಳನ್ನು ಸದಾ ಸ್ವಾಗತಿಸುವ, ಇಷ್ಟಪಡುವ, ನನಗೆ ಇವೆಲ್ಲವನ್ನು ಕಂಡಾಗ ಉಂಟಾದ ಅಳುಕು ಅಥವಾ ಹಿಂಜರಿಕೆಗೆ ನಾನು ಮಾತ್ರ ಕಾರಣವೆ? ವ್ಯಕ್ತಿಗತವಾದ ಸ್ವಭಾವ ಕಾರಣವೆ? ಅಲ್ಲ. ನಾನು ಬೆಳೆದು ಬಂದ ಸಾಮಾಜಿಕ ಹಿನ್ನೆಲೆಯೂ ಕಾರಣ. ಗ್ರಾಮೀಣ ಪರಿಸರದಿಂದ–ಅದರಲ್ಲೂ ನಿರ್ಲಕ್ಷಿತ ಸಾಮಾಜಿಕ ವಲಯದಿಂದ ಬಂದ ನನಗೆ ಈ ಬದಲಾವಣೆಯ ಬಹಿರಂಗ ಪೋಷಾಕುಗಳು ಪರಕೀಯ ಭಾವನೆಯ ಬೀಜ ಬಿತ್ತಿದ್ದವು. ಆದರೆ, ಅಂತರಂಗ ಮಾತ್ರ ಬದಲಾವಣೆಯ ಪರವಾಗಿಯೇ ಇತ್ತು. ಈ 'ದ್ವಂದ್ವ' ಅಥವಾ 'ವೈರುಧ್ಯ'ವನ್ನು ದಾಟುವುದು ನನ್ನಂಥವರಿಗೆ ಸಮಾಜೋ–ಸಾಂಸ್ಕೃತಿಕ ಸಮಸ್ಯೆಯಾಗಿತ್ತು. ಈ ಸಮಸ್ಯೆಗೆ ಮತ್ತಷ್ಟು ಪೂರಕವಾದದ್ದು ಅಲ್ಲಿ ನಡೆಯುತ್ತಿದ್ದ 'ಪ್ರತಿಭೆ' ಕುರಿತ ಮಾತುಕತೆ. 'ಹಳೆಯದರಲ್ಲಿ ಏನಿದೆ? ಜೊಳ್ಳು ಜಾಸ್ತಿ. ಶ್ರೇಷ್ಠವೆನ್ನುವ ಕೃತಿಗಳೇ ಕಡಿಮೆ. ಸಾಹಿತ್ಯಕ್ಕೆ ಬೇಕಾದ ಬಿಗಿ ಶಿಲ್ಪ ಇಲ್ಲ' ಇತ್ಯಾದಿ ಮಾತುಗಳಿಂದ ನನ್ನಲ್ಲಿ ಅನೇಕ ಪ್ರಶ್ನೆಗಳು ಹುಟ್ಟಿದವು. ಪ್ರಶ್ನೆಗಳು ಹುಟ್ಟುವುದು ಮತ್ತು ಪ್ರಶ್ನೆ ಮಾಡುವುದು 'ಮಾನಸಿಕ ಪ್ರಜಾಸತ್ತೆಯ ಒಂದು ಲಕ್ಷಣ. ಆದರೆ, ಈಗ ಬರುತ್ತಿರುವ ಸಾಹಿತ್ಯ ಮಾತ್ರವೇ ಅತ್ಯುತ್ತಮ ಅಥವಾ ಶ್ರೇಷ್ಠ ಎಂದು ಬೀಗುವುದು ಮತ್ತು ಬಿತ್ತುವುದು ಸರಿಯೆ?' ಎಂಬ ಪ್ರಶ್ನೆ ಕೇಳಿದರೆ-ಆಗ ನನ್ನನ್ನು ದಡ್ಡ ಎಂದು ಆ ದೊಡ್ಡವರು ಕರೆದಾರೆಂಬ ಅಳುಕು ಇತ್ತು. 'ದಡ್ಡ' ಎನ್ನಿಸಿಕೊಳ್ಳುವ ಧೈರ್ಯ ಮಾಡಲಿಲ್ಲ!

ಹೆಚ್ಚೂ ಕಡಿಮೆ ಇದೇ ಕಾಲಾವಧಿಯಲ್ಲಿ